ದಿನಾಂಕ: 22.01.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

ನಾನು ಅಪಘಾತವನ್ನು ನೋಡಿಲ್ಲ. ನನ್ನ ಮಗನಿಗೆ ವಾಹನ ಚಾಲನೆ ಮಾಡಲು ಡಿ ಎಲ್ ಅವನ ಕಡೆ ಇತ್ತು ನನಗೆ ಗೊತ್ತಿರುವುದಿಲ್ಲ. ನನ್ನ ಮಗನಿಗೆ ಕುಡಿಯುವ ಅಭ್ಯಾಸ ಇದೆ ಎಂದರೆ ಸರಿಯಲ್ಲ. ಅಪಘಾತ ರಾತ್ರಿ 10.45 ಗಂಟೆಯಲ್ಲಿ ಆಗಿರುತ್ತದೆ. ಪೊಲೀಸರು ಯಾರ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂಬುದರ ಬಗ್ಗೆ ತಿಳಿದುಕೊಂಡಿರುತ್ತೇನೆ. ನನ್ನ ಮಗ ಅವರ ಸ್ನೇಹಿತ ಫೈರೋಜ್ ಅಹಮದ್ ರವರ ಮೋಟಾರ್ ಸೈಕಲನ್ನು ಚಾಲನೆ ಮಾಡುತ್ತಿದ್ದ. ಮಂಜುನಾಥ ಜಿ ಡಿ ಎಂದರೆ ನನ್ನ ಮಗ. ನನ್ನ ಮಗ ಡಿ ಎಲ್ ಇಲ್ಲದೆ ವಾಹನ ಚಾಲನೆ ಮಾಡುತ್ತಿದ್ದ ಎಂದು ಪೊಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ನಿಜ. ದೋಷಾರೋಪಣಾ ಪಟ್ಟಿಯಲ್ಲಿ ನನ್ನ ಮಗ ಮಧ್ಯಪಾನ ಸೇವನೆ ಮಾಡಿ ಮೋಟರ್ ಸೈಕಲ್ ಚಾಲನೆ ಮಾಡಿದ್ದ ಎಂದು ಹೇಳಿದ್ದಾರೆ ಎಂದರೆ ಸರಿ . ಆದರೆ ನನ್ನ ಮಗ ಮಧ್ಯಪಾನ ಮಾಡಿರುವುದಿಲ್ಲ.

ನಿಂತಿದ್ದ ಲಾರಿಯ ಹಿಂಭಾಗಕ್ಕೆ ನನ್ನ ಮಗ ಹೋಗಿ ಡಿಕ್ಕಿ ಪಡಿಸಿದ್ದಾರೆ ಎಂದು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ನಿಜ . ಸಾಕ್ಷಿ ಲಾರಿ ರಸ್ತೆ ಮಧ್ಯೆಭಾಗದಲ್ಲಿ ನಿಂತಿತ್ತು ಎಂದು ನುಡಿಯುತ್ತಾರೆ. ಅಪಘಾತದ ಜಾಗವನ್ನು ನಾನು ನೋಡಿಲ್ಲ. ಅಪಘಾತದ ಜಾಗವನ್ನು ನಾನು ನೋಡದೇ ಇರುವುದರಿಂದ ಲಾರಿ ಎಲ್ಲಿ ನಿಂತಿತ್ತು ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ನಿಜ. ನನ್ನ ಮಗ ಡಿ ಎಲ್ ಇಲ್ಲದೆ ಮಧ್ಯಪಾನ ಸೇವನೆ ಮಾಡಿ ಮಣ್ಣಿನ ರಸ್ತೆಯಲ್ಲಿ ನಿಲ್ಲಿಸಿದ ಲಾರಿಗೆ ಡಿಕ್ಕಿ ಪಡಿಸಿ ಆತನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ.

ನನ್ನ ಮಗನಿಗೆ ಮದುವೆಯಾಗಿರಲಿಲ್ಲ ಎಂದರೆ ನಿಜ. ಆತನ ಆಧಾರ್ ಕಾರ್ಡ್ ಇದೆ. ನನ್ನ ಮಗ ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದಾನೆ. ನನ್ನ ಮಗನ ಜನ್ಮ ದಿನಾಂಕ 14.03.1997 ಎಂದರೆ ನಿಜ. ನನ್ನ ಮಗ ಕೂಲಿ ಕೆಲಸ ಮಾಡುತ್ತಿದ್ದ ತಿಂಗಳಿಗೆ ರೂ.30 ಸಾವಿರ ಸಂಬಳ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇಬ್ಬರು ಗಂಡು

ಮಕ್ಕಳು. ನನ್ನ ಹೆಸರಿಗೆ ಯಾವುದೇ ಜಮೀನು ಇರುವುದಿಲ್ಲ. ನನ್ನ ಮಗ ಮೃತ ಪಟ್ಟಿದ್ದರಿಂದ ನಮಗೆ ತೊಂದರೆಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ಮಗನ ತಪ್ಪಿನಿಂದಲೇ ಆಗಿರುವುದರಿಂದ 2 ನೇ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**<u>3 ನೇ ಎದುರುದಾರರಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು